**ಮೋಟಾರು ವಾಹನ ಅಪಘಾತಗಳ ಪರಿಹಾರ ಮಂಡಳಿ, ಬೆಂಗಳೂರು,**

**1ನೇ ಲಘು ವ್ಯವಹಾರಗಳ ನ್ಯಾಯಾಲಯ ಮತ್ತು ಎ.ಸಿ.ಜೆ.ಎಂ. ನ್ಯಾಯಾಲಯ ಬೆಂಗಳೂರು**

**ಎಂ.ವಿ.ಸಿ.: 3661/2023**

ಆರ್.ಡಬ್ಲೂ 1

| | | |
|---|---|---|
| **ಸಾಕ್ಷಿದಾರರ ಹೆಸರು** | : | ಕುಮಾರ ಎಂ. |
| **ತಂದೆಯ ಹೆಸರು** | : | ಲೇಟ್ ಮಂಜುನಾಥ್ |
| **ವಯಸ್ಸು** | : | 48 ವರ್ಷ |
| **ಉದ್ಯೋಗ** | : | ಕಛೇರಿ ಅಧೀಕ್ಷಕರು, ಪ್ರಾದೇಶಿಕ ಸಾರಿಗೆ ಕಛೇರಿ, ಹಾಸನ |
| **ವಾಸ ಸ್ಥಳ** | : | ಹಾಸನ |

**ದಿನಾಂಕಃ 26.12.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ 2ನೇ ಎದುರುದಾರರ ಪರ ಮಾನ್ಯ ವಕೀಲರಿಂದ.**

ನ್ಯಾಯಾಲಯದಿಂದ ಸಮನು ಬಂದ ಕಾರಣ ನಾನು ಈ ದಿನ ನ್ಯಾಯಾಲಯಕ್ಕೆ ಹಾಜರಾಗಿ ಸಾಕ್ಷ್ಯ ನುಡಿಯುತ್ತಿದ್ದೇನೆ ಮತ್ತು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸುತ್ತಿದ್ದೇನೆ.

ನಾನು ಎರಡೂವರೆ ವರ್ಷಗಳಿಂದ ಕಛೇರಿ ಅಧೀಕ್ಷಕರಾಗಿ ಹಾಸನದ ಪ್ರಾದೇಶಿಕ ಸಾರಿಗೆ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದೇನೆ.

ಅಧಿಕಾರ ಪತ್ರವನ್ನು **ನಿ.ಆರ್ 1** ಎಂದು, ಚಾಲನಾ ಪರವಾನಗಿಯ ಎಕ್ಸ್ ಟ್ರ್ಯಾಕ್ಟ್ ಅನ್ನು **ನಿ.ಆರ್ 2** ಎಂದು ಗುರುತಿಸಲಾಯಿತು.

ನಿ.ಆರ್ 2 ರ ರೀತ್ಯ, ಸದರಿ ದಾಖಲಾತಿಯ ನಮೂದಿಸಿದ ವ್ಯಕ್ತಿಗೆ ಸಾರಿಗೇತರ ವಾಹನ ಚಾಲನೆ ಮಾಡಲು ದಿನಾಂಕ 23.04.2012ರಿಂದ ದಿಃ 22.04.2032ರವರೆಗೆ ಮತ್ತು ಸಾರಿಗೆ ವಾಹನ ಚಾಲನೆ ಮಾಡಲು ದಿನಾಂಕ 30.01.2018 ರಿಂದ ದಿಃ 29.01.2021ರವರೆಗೆ ಪರವಾನಗಿ ಚಾಲ್ತಿಯಲ್ಲಿತ್ತು. ದಿನಾಂಕ 13.05.2023ರಂದು ನಿ.ಆರ್ 2 ರಲ್ಲಿ ನಮೂದಿಸಿದ ವ್ಯಕ್ತಿಗೆ ಸಾರಿಗೆ ವಾಹನ ಚಾಲನೆ ಮಾಡಲು ಪರವಾನಗಿ ಇರಲಿಲ್ಲ. ನಿ.ಆರ್ 2 ರ ಆಧಾರದ ಮೇರೆಗೆ ಹೆಚ್.ಜಿ.ವಿ ವಾಹನವನ್ನು ಚಾಲನೆ ಮಾಡಲು ಆಗುವುದಿಲ್ಲ. ಆರ್.ಎಲ್.ಡಬ್ಲೂ. ( Registered Laden weight) ತೂಕ 12500 ಕೆ.ಜಿ ಗಿಂತ ಮೇಲ್ಪಟ್ಟ ವಾಹನಗಳನ್ನು ಹೆಚ್.ಜಿ.ವಿ ಎಂದು ಪರಿಗಣಿಸಲಾಗುತ್ತದೆ. ಅನ್ ಲಾಡೆನ್ ತೂಕದ ಆಧಾರದ ಮೇರೆಗೆ ವಾಹನದ ವರ್ಗೀಕರಣ ಮಾಡುವುದಿಲ್ಲ.

**ಪಾಟೀ ಸವಾಲುಃ ಅರ್ಜಿದಾರರ ಪರ ಮಾನ್ಯ ವಕೀಲರಿಂದ.**

ನಿ.ಆರ್ 1 ಅನ್ನು ನೀಡಿದವರ ಹುದ್ದೆ ನಮೂದು ಇದ್ದು, ಅದರಲ್ಲಿ ಹೆಸರು ಇರುವುದಿಲ್ಲ, ಆದರೆ ಸಹಿ ಇರುತ್ತದೆ. ಬೇರೆ ಪ್ರಾದೇಶಿಕ ಸಾರಿಗೆ ಕಛೇರಿಯಿಂದ ಸಾರಿಗೆ ವಾಹನಕ್ಕೆ ಪರವಾನಗಿ ಪಡೆದಿದ್ದಲ್ಲಿ ನಮ್ಮ ಕಛೇರಿಯಲ್ಲಿ ಆ ಬಗ್ಗೆ ದಾಖಲಾತಿ ಲಭ್ಯವಾಗುತ್ತದೆ ಹಾಗೂ ನಿ.ಆರ್ 2 ರಲ್ಲಿಯೂ ಸಹ ನಮೂದು ಬರುತ್ತದೆ. ಎಲ್.ಎಂ.ವಿ ಪರವಾನಗಿ ಹೊಂದಿದವರು ಎಂ.ಜಿ.ವಿ ವಾಹನ ಚಾಲನೆ ಮಾಡಬಹುದು ಎಂದರೆ ಸಾಕ್ಷಿಯು ವಾಹನದ

**ಆರ್.ಡಬ್ಲ್ಯೂ 1 ಕುಮಾರ ಎಂ.**

ಅನ್ ಲಾಡೆನ್ ತೂಕ 7500 ಕೆ.ಜಿ ವರೆಗೆ ಮಾತ್ರ ಚಾಲನೆ ಮಾಡಬಹುದು, ಅದಕ್ಕೂ ಮೀರಿದ ವಾಹನಗಳನ್ನು ಚಾಲನೆ ಮಾಡಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ವಾಹನದ ಒಟ್ಟು ತೂಕ 7500 -12500 ಕೆ.ಜಿ ವರೆಗಿನ ವಾಹನಗಳನ್ನು ಎಂ.ಜಿ.ವಿ ಎಂದು ಪರಿಗಣಿಸುತ್ತೇವೆ. ನಾನು ಪಧವೀದರ. ದಾಖಲಾತಿಗಳನ್ನು ಸೃಷ್ಟಿಸಿ ಹಾಜರುಪಡಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

**(ಓ.ಹೇ.ಕೇ.ಸ.ಇ.)**

**1ನೇ ಎಸ್‌ಸಿಜೆ ಮತ್ತು ಎಸಿಜೆಎಮ್**

**ಬೆಂಗಳೂರು**